# ಮೈಸೂರು ಮಹಾನಗರ ಪಾಲಿಕೆ

ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.

ಸಭೆಯ ದಿನಾಂಕ : 16-09-2009.

ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ

ಅಧ್ಯಕ್ಷತೆ : ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

| ಕ್ರ. ಸಂ. | ಹಾಜರಿದ್ದವರು | ಕ್ರ ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ಪುರುಷೋತ್ತಮ, ಮಾನ್ಯ ಮಹಾಪೌರರು, ಮೈನಪಾ | 19. | ಶ್ರೀ ಬಿ.ಸಿ.ಕುಮಾರ್, ಸಕಾಅ, ಕೆ.ಎಸ್.ಆರ್.ಟಿ.ಸಿ |
| 2. | ಶ್ರೀ ಶಿವಕುಮಾರ್, ಅಇಂ, ಮೂಡಾ | 20. | ಶ್ರೀ ಎಂ. ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ. |
| 3. | ಶ್ರೀ ಮಹೇಶ್, ಅಇಂ, ಮೂಡಾ | 21. | ಶ್ರೀ ಡಿ. ಮಲ್ಲಿಕಾರ್ಜುನ, ಪ್ರಾಜೆಕ್ಟ್ ಮ್ಯಾನೇಜರ್, ಎನ್.ಸಿ.ಸಿ.ಎಲ್ |
| 4. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ, ಮೈನಪಾ | 22. | ಶ್ರೀ ಬಾಲು ಪಿ. ರೆಡ್ಡಿ, ಪ್ರಾಜೆಕ್ಟ್ ಮ್ಯಾನೇಜರ್, ಜಿ.ಕೆ.ಸಿ ಪ್ರಾಜೆಕ್ಟ್ |
| 5. | ಶ್ರೀ ಎಂ.ಎಸ್ ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ | 23. | ಶ್ರೀ ಎ. ಘೋಷ್, ಚೀಫ್, ಜಸ್ಕೋ |
| 6. | ಶ್ರೀ ಎಸ್.ಎ. ಚಂದ್ರಕಾಂತ್, ಕಾಅ, ನರ್ಮ್ | 24. | ಶ್ರೀ ಆರ್. ಪುರೋಹಿತ್, ಚೀಫ್, ಜಸ್ಕೋ |
| 7. | ಶ್ರೀ ಹೊನ್ನೇಗೌಡ, ಕಾಅ., ಕೆಯುಡಬ್ಲ್ಯೂಎಸ್ & ಡಿಬಿ | 25. | ಶ್ರೀ ಡಿ.ಆರ್. ರಂಗೇಗೌಡ, ಪ್ರಾಜೆಕ್ಟ್ ಮ್ಯಾನೇಜರ್, ಎನ್.ಸಿ.ಸಿ.ಎಲ್ |
| 8. | ಶ್ರೀ ನಾಗರಾಜಮೂರ್ತಿ, ಕಾಅ, ಕೆ.ಎಸ್.ಆರ್.ಟಿ.ಸಿ | 26. | ಶ್ರೀ ಆಂಜನೇಯಲು, ಪ್ರಾಜೆಕ್ಟ್ ಮ್ಯಾನೇಜರ್, ಆರ್.ಎಂ.ಎನ್ |
| 9. | ಶ್ರೀ ರಾಜಶೇಖರ್, ಪೋಲಿಸ್ ಇನ್ಸ್‌ಪೆಕ್ಟರ್, ಮೈಸೂರು | 27. | ಶ್ರೀ ಶರವಣನ್, ಕನ್ಸಸ್ಟ್ರಕ್ಷನ್ ಇಂಜಿನಿಯರ್, ಎಸ್.ಟಿ.ಯು.ಪಿ |
| 10. | ಶ್ರೀ ಪ್ರಭಾಕರ್ ಬಿ.ಬಾರ್ಕ್, ಪೋಲಿಸ್ ಇನ್ಸ್‌ಪೆಕ್ಟರ್, ಮೈಸೂರು | 28. | ಶ್ರೀ ಶರತ್ ಹೆಚ್.ಎಸ್, ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 11. | ಶ್ರೀ ಡಿ. ಪದ್ಮನಾಭ್, ಅಧ್ಯಕ್ಷರು, ಜಿಲ್ಲಾ ಪ್ಲಾನಿಂಗ್ ಕಮಿಟಿ | 29. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ, ಜೆಎನ್‌ನರ್ಮ್ |
| 12. | ಶ್ರೀ ಸಂದೇಶಸ್ವಾಮಿ, ನಗರಪಾಲಿಕೆ ಸದಸ್ಯರು, ಮೈನಪಾ | 30. | ಶ್ರೀ ಪಿ.ವಿ. ರಾಮದಾಸ್, ಪ್ರಾಜೆಕ್ಟ್ ಕೋ-ಆರ್ಡಿನೇಟರ್, ಸಿ.ಎಂ.ಸಿ.ಎ |
| 13. | ಶ್ರೀ ನಾಗೇಂದ್ರ, ನಗರಪಾಲಿಕೆ ಸದಸ್ಯರು, ಮೈನಪಾ | 31. | ಶ್ರೀ ವಿ. ಕುಮಾರ್, ಬೂತ್ ಕಮಿಟಿ ಲೀಡರ್ (ವಾರ್ಡ್ ನಂ.23) |
| 14. | ಶ್ರೀ ಸುಧಾ ಎಂ.ವಿ, ಪಿಡಿ, ಡಿಯುಡಿಸಿ | 32. | ಶ್ರೀ ಕೆ.ಎಸ್. ಕಾರ್ಯಪ್ಪ, ಬೂತ್ ಕಮಿಟಿ ಲೀಡರ್ (ವಾರ್ಡ್ ನಂ.23) |
| 15. | ಶ್ರೀ ಎ.ಎನ್.ಪ್ರಸಾದ್, ಸಕಾಇಂ, ಮೈನಪಾ | 33. | ಶ್ರೀ ಕೆ.ಎಸ್. ಸೋಮಶೇಖರ್, ಬೂತ್ ಕಮಿಟಿ ಲೀಡರ್ (ವಾರ್ಡ್ ನಂ.23) |
| 16. | ಶ್ರೀ ರಾಮಚಂದ್ರಯ್ಯ, ಸಕಾಇಂ, ಕೆಯುಡಬ್ಲ್ಯೂಎಸ್ & ಡಿಬಿ | 34. | ಶ್ರೀ ಗಂಗಾಧರಪ್ಪ, ಬೂತ್ ಕಮಿಟಿ ಲೀಡರ್ (ವಾರ್ಡ್ ನಂ.23) |
| 17. | ಶ್ರೀ ಶ್ರೀಧರ್, ಸಕಾಇಂ, ನರ್ಮ್ | 35. | ಶ್ರೀ ಜಿ.ವಿ. ಕೃಷ್ಣ, ಬೂತ್ ಕಮಿಟಿ ಲೀಡರ್ (ವಾರ್ಡ್ ನಂ.23) |
| 18. | ಶ್ರೀ ಬಸವರಾಜು, ಸಕಾಇಂ, ನರ್ಮ್ | 36. | ಶ್ರೀ ಉಸ್ತಾದ್ ಹುಸೇನ್, ಆರ್ಕಿಟೆಕ್ಟ್ |

ಹಿಂದಿನ ಸಭೆಯ ದಿನಾಂಕ : 02/09/09

ಮುಂದಿನ ಸಭೆಯ ದಿನಾಂಕ : 07/10/09

ಮುಂದಿನ ಸಭೆಯ ವೇಳೆ : ಬೆಳಿಗ್ಗೆ 9.00 ಗಂಟೆಗೆ

ಮುಂದಿನ ಸಭೆಯ ಸ್ಥಳ : ಎಂ.ಸಿ.ಸಿ ಸಭೆಯ ಸಭಾಂಗಣ, ಮೈಸೂರು

ತಯಾರಿಸಿದವರು : ಶ್ರೀ ಬಿ.ಕೆ. ಸುರೇಶ್‌ಬಾಬು

ಕಳುಹಿಸಿರುವುದು : ಶ್ರೀ ಬಿ.ಕೆ. ಸುರೇಶ್‌ಬಾಬು

ಟಿಪ್ಪಣಿ:

- ಎಲ್ಲರೂ ಸಭೆಯ ನಡವಳಿಯ ಪ್ರತಿಯನ್ನು ಮುಂದಿನ ಸಭೆಗೆ ತರಲು ಕೋರಲಾಗಿದೆ.
- ಸಭೆಯ ನಡವಳಿಕೆಗೆ ಪಾಲನಾ ವರದಿಯನ್ನು ಮುಂದಿನ ಸಭೆ ನಡೆಯುವ 2 ದಿವಸಗಳ ಮುಂಚಿತವಾಗಿ ಸಲ್ಲಿಸುವುದು.
- ಅನುಪಾಲನಾ ವರದಿಯನ್ನು ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮನ್ವಯಾಧಿಕಾರಿ, ನರ್ಮ್ ಯೋಜನೆ ಇವರಿಗೆ ಕಳುಹಿಸಿಕೊಟ್ಟು, ಈ ಅಧಿಕಾರಿಯು ವರದಿಯನ್ನು ಕ್ರೋಢೀಕರಿಸಿ, ಈ ಕೆಳಗೆ ಸಹಿ ಮಾಡಿರುವವರಿಗೆ ಒಂದು ದಿವಸ ಮುಂಚಿತವಾಗಿ ಪರಿಶೀಲನೆಗಾಗಿ ಮಂಡಿಸುವುದು.
- ನರ್ಮ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳನ್ನು ಮೈಸೂರು ನಗರಪಾಲಿಕೆಗೆ ಕಳುಹಿಸುವುದು.

* * * * *

ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರಪಾಲಿಕೆ (ಜೆ.ಎನ್.ಎನ್.ನರ್ಮ್), ಇವರು ಮಾನ್ಯ ಮಹಾಪೌರರು ಮೈಸೂರು ಮಹಾನಗರ ಪಾಲಿಕೆ, ಆಯುಕ್ತರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮತ್ತು ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು. ಆಯುಕ್ತರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಇವರು ಸಭೆಯ ಅಧ್ಯಕ್ಷತೆ ವಹಿಸಿ, ಕಾಮಗಾರಿ ಪ್ರಗತಿಯನ್ನು ಈ ಕೆಳಕಂಡಂತೆ ಪರಿಶೀಲಿಸಿದರು.

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು<br><br>ಯೋಜನಾ ಮುಕ್ತಾಯ ದಿನಾಂಕ:ಜನವರಿ-2010 | 2009 ಆಗಸ್ಟ್ ತಿಂಗಳ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 60.32 ಕೋಟಿಗಳ ಎದುರಾಗಿ ರೂ. 61.55 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br><br>ದಸರಾ ಹಬ್ಬವು ಹತ್ತಿರ ಇರುವುದರಿಂದ, ಹಿಂದಿನ ಸಭೆಯಲ್ಲಿ ಈಗಾಗಲೇ ಒಪ್ಪಿರುವಂತೆ, ನೀರು ಸರಬರಾಜು ಪೈಪ್‌ಲೈನ್ ಅಳವಡಿಕೆಗೆ ಅಗೆದಿರುವ ರಸ್ತೆಯನ್ನು ಸರಿಮಾಡಿ ದಿನಾಂಕ: 10.09.2009 ಒಳಗೆ ಎಲ್ಲಾ ರಸ್ತೆಗಳನ್ನು ಪೂರ್ಣಗೊಳಿಸಿ ಸುಸ್ಥಿತಿಯಲ್ಲಿ ತರುವಂತೆ ಮತ್ತೊಮ್ಮೆ ಕಾರ್ಯಪಾಲಕ ಇಂಜಿನಿಯರ್, ಇವರಿಗೆ ಸೂಚಿಸಲಾಯಿತು.<br><br>ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ದಿನಾಂಕ: 10.09.2009ರ ಒಳಗೆ ರಸ್ತೆಯನ್ನು ಸರಿಪಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲದಿರುವ ಬಗ್ಗೆ ತಿಳಿಸುತ್ತಾ, ಹೆಚ್ಚಿನ 3–4 ದಿನಗಳ ಅವಧಿಯನ್ನು ಕೋರಿದರು. ಇದನ್ನು ಅಸಮಧಾನದಿಂದ ಗಮನಿಸಲಾಯಿತು. | 2009 ಸೆಪ್ಟೆಂಬರ್ ತಿಂಗಳ 15ಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 61.87 ಕೋಟಿಗಳ ಎದುರಾಗಿ ರೂ. 61.90 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br><br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 40.66 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 22.19 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.<br><br>ಒಳಭಾಗದ ಲೈನಿಂಗ್ ಮಾಡುವ ಕಾಮಗಾರಿಯಲ್ಲಿ ಯಾವುದೇ ಪ್ರಗತಿ ಇರುವುದಿಲ್ಲ. ದಸರಾ ಹಬ್ಬದ ಹಿನ್ನಲೆಯಲ್ಲಿ ರಸ್ತೆಯ ದುರಸ್ಥಿ | |

| ಕ್ರ ಸಂ | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | | ಹಿಂದಿನ ಸಭೆಯಲ್ಲಿ ದಿನಾಂಕ: **10.09.2009ರ** ಒಳಗೆ ಪೂರ್ಣಗೊಳಿಸುವುದಾಗಿ ಕಾರ್ಯಪಾಲಕ ಇಂಜಿನಿಯರ್ ಇವರು ಒಪ್ಪಿಕೊಂಡಿದ್ದು, ಅದರಂತೆ, ಅವರ ಮಾತಿಗೆ ಬದ್ಧರಾಗಿರುವಂತೆ ಮತ್ತು ಕಾಮಗಾರಿಯನ್ನು ಅವಧಿಯೊಳಗೆ ಮುಗಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br><br>ಇದೇ ಸಮಯದಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರು ಕಾಮಗಾರಿಯನ್ನು **2–3** ದಿನಗಳಲ್ಲಿ ಪೂರ್ಣಗೊಳಿಸಲು ವಿಫಲವಾದಲ್ಲಿ ಅದನ್ನು ಪಾಲಿಕೆ ವತಿಯಿಂದ ತೆಗೆದುಕೊಂಡು ಅದರ ವೆಚ್ಚವನ್ನು ಜಲಮಂಡಳಿಯ ಲೆಕ್ಕದಿಂದ ಭರಿಸುವಂತೆ ಸೂಚಿಸಲಾಯಿತು.<br><br>ಅಲ್ಲದೇ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲವಾದಲ್ಲಿ ಈ ಬಗ್ಗೆ ಒಂದು ಅರೆಸರ್ಕಾರಿ ಪತ್ರವನ್ನು ವ್ಯವಸ್ಥಾಪಕನಿರ್ದೇಶಕರು ಕೆಯುಡಬ್ಲ್ಯೂಎಸ್&ಡಿಬಿ ಇವರಿಗೆ ಬರೆಯಲು ಸೂಚಿಸಲಾಯಿತು. | ಕೆಲಸವನ್ನು ಹಿಂದಿನ ಸಭೆಯಲ್ಲಿ ತಿಳಿಸಿದ ಹಾಗೆ ಕೈಗೊಳ್ಳಲಾಗುತ್ತಿದೆಯೆಂದು ಕಾರ್ಯಪಾಲಕ ಅಭಿಯಂತರು, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br>ರಸ್ತೆ ದುರಸ್ಥಿ ಸಂದರ್ಭದಲ್ಲಿ ಯಾವುದೇ ತೊಂದರೆಯನ್ನು ನಿವಾರಿಸಲು ಒಂದು ಪ್ರತ್ಯೇಕವಾದ ತಂಡವನ್ನು ರಚಿಸಿರುವುದಾಗಿ ತಿಳಿಸಿದರು.<br><br>ಈ ಬಗ್ಗೆ ಅಧೀಕ್ಷಕ ಅಭಿಯಂತರು, ನರ್ಮ್ ಇವರು ಕಾರ್ಯಪಾಲಕ ಅಭಿಯಂತರು, ಕೆ.ಯು.ಡಬ್ಲ್ಯೂಎಸ್ & ಡಿಬಿಯವರಿಗೆ ಒಂದು ಸಹಾಯ ವಾಣಿಯನ್ನು ಸ್ಥಾಪಿಸಿ ಅದರ ವಿವರಗಳನ್ನು ಸಾರ್ವಜನಿಕರಿಗೆ ಪ್ರೆಸ್ ಮೂಲಕ ನೀಡಲು ಸೂಚಿದರು. ಇದರಿಂದ ಯಾವುದೇ ತೊಂದರೆಯನ್ನು ನಿವಾರಿಸಲು ಸಾಧ್ಯವಾಗುವುದೆಂದು ತಿಳಿಸಿದರು.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ **26.90** ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, **19.37** ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ **4.03** ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ **25** ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು. | |
| **2** | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. **5.24** ಕೋಟಿ<br>Agency: M/s. Mechatronics<br>ಅವಧಿ: 9 ತಿಂಗಳು ಮುಕ್ತಾಯ ವಾಗಬೇಕಾದುದು : ಜುಲೈ-2009 | ಚರ್ಚೆಯಾಗಿರುವುದಿಲ್ಲ. | ಸಲಕರಣೆಗಳನ್ನು ನಿರ್ಮಿಸುವ, ಎರೆಕ್ಷನ್ ಮಾಡುವ ಕಾಮಗಾರಿಯು ಪೂರ್ಣಗೊಂಡಿದ್ದು, ಈ ಸಂಬಂಧದ ಸಾಫ್ಟ್‌ವೇರ್ ತಯಾರಿಕಾ ಹಂತದಲ್ಲಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| 3 | 24 x 7 ನೀರು ಸರಬರಾಜು<br>ಪಶ್ಚಿಮ ವಲಯ: ಅಂದಾಜುಮೊತ್ತ 56.07 ಕೋಟಿ ರೂ. ಸಿಎಸ್‌ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ ಭಾಗಶ: ಅಂದಾಜುಮೊತ್ತ 45.84 ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ ಭಾಗಶ:<br>ಮುಕ್ತಾಯವಾಗಬೇಕಾದುದು: Jan-2013 | ಚರ್ಚೆಯಾಗಿರುವುದಿಲ್ಲ. | ಜಸ್ಕೋ ವಿಷಯಕ್ಕೆ ಸಂಬಂದಿಸಿದಂತೆ, ಎಲ್ಲಾ ನಗರಪಾಲಿಕೆ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳೊಂದಿಗೆ ಒಂದು ಪ್ರತ್ಯೇಕ ಸಭೆಯನ್ನು ಕರೆಯುವಂತೆ ಪೂಜ್ಯ ಮಹಾಪೌರರು ಸೂಚಿಸಿದರು. ಮತ್ತು ಜಸ್ಕೋ ಕಂಪನಿಯವರಿಗೆ ಅವರ ಯೋಜನೆ ಬಗ್ಗೆ Power Point Presentation ನೀಡಲು ಆದೇಶಿಸಿದರು. | |
| 4 | ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ ನದಿಯಿಂದ ತರುವ ಯೋಜನೆ:<br>ಯೋಜನೆಯ ಅಂದಾಜು ರೂ. 108.81 ಕೋಟಿ<br>ಮುಕ್ತಾಯವಾಗಬೇಕಾದುದು Jan-2012 | ಶ್ರೀ ಭೈರಪ್ಪ, ಪಾಲಿಕೆ ಸದಸ್ಯರು ಇವರು ಕಬಿನಿ ಯೋಜನೆ ಬಗ್ಗೆ ಇತ್ತೀಚಿನ ಹಂತಗಳ ವಿವರಗಳನ್ನು ಕೋರಿದರು. ಇದಕ್ಕೆ ಉತ್ತರವಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ಸದರಿ ಕಾಮಗಾರಿಗೆ ಮಂಡಳಿ ವತಿಯಿಂದ ಟೆಂಡರ್‌ನ್ನು ಅಂತಿಮಗೊಳಿಸಲಾಗಿದ್ದು, ಗುತ್ತಿಗೆದಾರರಿಗೆ ಅಂಗೀಕಾರ ಪತ್ರವನ್ನು ನೀಡಬೇಕಾಗಿದೆ ಎಂದು ತಿಳಿಸಿದರು.<br>ಅಂಗೀಕಾರ ಪತ್ರವನ್ನು ಕೂಡಲೇ ನೀಡಲು ಕ್ರಮ ತೆಗೆದುಕೊಳ್ಳುವಂತೆ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ಸೂಚಿಸಲಾಯಿತು ಹಾಗೂ ಸಭೆಯಲ್ಲಿ ಒಪ್ಪಿರುವಂತೆ ಕಾಮಗಾರಿಯನ್ನು ದಿನಾಂಕ 09.09.09 ರಂದು ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. | ಈ ಬಗ್ಗೆ ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಗುತ್ತಿಗೆದಾರರಿಗೆ ವಹಿಸಲಾಗಿದೆ ಎಂದು ತಿಳಿಸಿದರು. ಕಾಮಗಾರಿಯ ಶಂಖು ಸ್ಥಾಪನೆಯನ್ನು ನೆರವೇರಿಸಲು ಮಾನ್ಯ ಸ್ಥಳೀಯ ಶಾಸಕರು ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯರವರಿಂದ ದಿನಾಂಕವನ್ನು ನಿರೀಕ್ಷಿಸಲಾಗಿದ್ದು, ಮಾನ್ಯ ಶಾಸಕರಿಂದ ದಿನಾಂಕ ನಿಗಧಿಯಾದ ನಂತರ ಶಂಕು ಸ್ಥಾಪನೆ ನೆರವೇರಿಸಲಾಗುವುದೆಂದು ತಿಳಿಸಿದರು. | |
| 5 | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು.<br>ಯೋಜನಾ ವೆಚ್ಚ: | ಹಿಂದಿನ ಸಭೆಯಲ್ಲಿ ನಿರ್ಧರಿಸಿದಂತೆ, ನಗರ ಬಸ್ ನಿಲ್ದಾಣದ ಕಾಮಗಾರಿ ಪೂರ್ಣಗೊಂಡಿದ್ದು, ದಸರಾ ಹಬ್ಬ ಪ್ರಾರಂಭವಾಗುವ ಮೊದಲು | ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ ಇವರು ನಗರ ಬಸ್ ನಿಲ್ದಾಣದ ಸಬ್‌ವೇ ಕಾಮಗಾರಿಯ ನಿರ್ವಹಣೆಯ ಸಂದರ್ಭದಲ್ಲಿ ಒಂದು | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | ರೂ 85.25 ಕೋಟಿಗಳು. ಗುತ್ತಿಗೆ ಪ್ರೀಮಿಯಂ: 17.50% ಮೇಲ್ಪಟ್ಟು (ರೂ108.59 ಕೋಟಿ) ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು 18 ತಿಂಗಳು (3 ತಿಂಗಳು ಮಾನ್ಸೂನ್ ಕಾಲ) | ದಿನಾಂಕ: 15.09.2009 ರಂದು ಪ್ರಾರಂಭ ಮಾಡಲು ಸಿದ್ದವಿರುವುದಾಗಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದರು. ದಿನಾಂಕ: 15.09.2009 ರಂದು ನಗರ ಬಸ್ ನಿಲ್ದಾಣದ ಪ್ರಾರಂಭೋತ್ಸವ ನಡೆಸಲು ಮಾನ್ಯ ಸಾರಿಗೆ ಸಚಿವರೊಂದಿಗೆ ಚರ್ಚಿಸಿ, ಕಾರ್ಯಕ್ರಮ ನಿಗಧಿಪಡಿಸುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ ಇವರಿಗೆ ಪತ್ರ ಬರೆಯಲು ಸೂಚಿಸಲಾಯಿತು. | ಗಮನಿಸಲಾಗಿರದ ಮಳೆ ನೀರು ಚರಂಡಿ ಅಡ್ಡ ಬಂದಿದ್ದು ಇದು ಸಬ್‌ವೇ ಮತ್ತು ಪ್ಲಾಟ್‌ಫಾರ್ಮ್ ತಳಪಾಯದ ಕಾಮಗಾರಿಗೆ ತೊಂದರೆಯನ್ನು ಉಂಟು ಮಾಡಿದ್ದು, ಈ ಚರಂಡಿಯ ತಿರುವನ್ನು ಬದಲಾಯಿಸಿದ ನಂತರ ಮುಂದಿನ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ ಅಲ್ಲದೆ ಅನಿರೀಕ್ಷಿತ ಮಳೆಯಿಂದಾಗಿ ಕಾಮಗಾರಿಯನ್ನು ದಿನಾಂಕ: 15.09.2009 ಒಳಗೆ ಎಲ್ಲಾ ವಿಧದಲ್ಲೂ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದರು. ಸನ್ಮಾನ್ಯ ಸಾರಿಗೆ ಮಂತ್ರಿಗಳು ಸಹ ಕಾಮಗಾರಿಯು ಎಲ್ಲಾ ವಿಧದಲ್ಲೂ ಪೂರ್ಣಗೊಂಡ ನಂತರ ಇದನ್ನು ಉದ್ಘಾಟನೆ ಮಾಡುವುದು ಸೂಕ್ತವೆಂದು ಸೂಚಿಸಿರುತ್ತಾರೆಂದು ತಿಳಿಸಿದರು. | |

<u>ಸಾರ್ವಜನಿಕರ ಚರ್ಚೆಗಳು:</u>

- ಶ್ರೀ ಲಕ್ಷ್ಮಣ್‌ರವರು ಎ.ಸಿ.ಐ.ಸಿ.ಎಂ ಸಂಚಾಲಕರು ಇವರು ಮಾತನಾಡಿ, ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಮೈಸೂರಿನ ಎಲ್ಲಾ ಭಾಗದ ಜನತೆಗೆ ಕುಡಿಯುವ ನೀರಿನ ಸರಬರಾಜು ಮಾಡಲು ಸಾಧ್ಯವೇ, ಈ ಬಗ್ಗೆ ಹೆಚ್ಚಿನ ಅನುದಾನ ತರಲು ಸಾಧ್ಯವೇ ಎಂಬುದರ ಬಗ್ಗೆ ವಿವರ ಕೋರಿದರು.
- ಇದಕ್ಕೆ ಉತ್ತರವಾಗಿ, ಅಧೀಕ್ಷಕ ಅಭಿಯಂತರು (ನರ್ಮ್) ರವರು, ಸ್ಟೂಪ್ ಕನ್ಸಲ್ಟೆಂಟ್‌ರವರನ್ನು ಈ ಬಗ್ಗೆ ವಿವರವಾದ ವರದಿಯನ್ನು ತಯಾರಿಸಲು ನೇಮಿಸಲಾಗಿದ್ದು, ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ತಿಳಿಸಿದರು. ಸ್ಟೂಪ್ ಕನ್ಸಲ್ಟೆಂಟ್‌ರವರು ಸಂಗ್ರಹಿಸುವ ಮಾಹಿತಿ ಆಧಾರದ ಮೇಲೆ ಒಂದು ವರದಿಯನ್ನು ತಯಾರಿಸಿ, ನಂತರ ಈ ಬಗ್ಗೆ ಚರ್ಚಿಸಲು ಸಭೆಯನ್ನು ಕರೆಯುವುದಾಗಿ ತಿಳಿಸಿದರು.
- ಶ್ರೀ ಡಿ ಪದ್ಮನಾಭ್, ಅಧ್ಯಕ್ಷರು, ಜಿಲ್ಲಾ ಪ್ಲಾನಿಂಗ್ ಕಮಿಟಿ ಇವರು ನೀರು ಸರಬರಾಜು ವಿತರಣಾ ಜಾಲದ ನಕ್ಷೆಯ ಲಭ್ಯತೆ ಇಲ್ಲದಿರುವುದನ್ನು ಪ್ರಸ್ತಾಪಿಸಿ ಇದನ್ನು ಮುಂದಿನ ಸಭೆಯಲ್ಲಿ ನೀಡಲು ಸೂಚಿಸಿದರು. ಈ ಬಗ್ಗೆ ಅಧೀಕ್ಷಕ ಇಂಜಿನಿಯರ್, ಮೈಸೂರು ಮಹಾನಗರ ಪಾಲಿಕೆ ಇವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಲಾಯಿತು.

- ಎರಡನೆಯದಾಗಿ ಶ್ರೀ ಡಿ ಪದ್ಮನಾಭ್, ಅಧ್ಯಕ್ಷರು, ಜಿಲ್ಲಾ ಪ್ಲಾನಿಂಗ್ ಕಮಿಟಿ ಇವರು ನರ್ಮ್ ಕಾಮಗಾರಿಗಳನ್ನು ವೀಕ್ಷಿಸಲು ನಗರಪಾಲಿಕೆ ಸದಸ್ಯರುಗಳು ಮತ್ತು ನರ್ಮ್ ಮೆಂಬರ್ಸ್‌ಗಳ ಜೊತೆಯಾಗಿ ಜಂಟಿ ಪರಿವೀಕ್ಷಣೆ ಮಾಡಲು ದಿನಾಂಕವನ್ನು ನಿಗದಿಪಡಿಸುವಂತೆ ಕೋರಿದರು.
- ಶ್ರೀ ಕೃಷ್ಣ, 5ನೇ ಬೂತ್ ಕಮಿಟಿ ಲೀಡರ್ (ವಾರ್ಡ್ ನಂ.23) ಇವರು ಮಾತನಾಡಿ, ಸಾರ್ವಜನಿಕರ ಭಾಗವಹಿಸುವಿಕೆ ಅಡಿಯಲ್ಲಿ ಸಲ್ಲಿಸಲಾಗಿರುವ ಯೋಜನೆಗಳ ಹಂತದ ಬಗ್ಗೆ ಸ್ಪಷ್ಟವಾದ ಮಾಹಿತಿ ದೊರಕುತ್ತಿಲ್ಲವೆಂದು ತಿಳಿಸಿದರು. ಮತ್ತು ಗಂಗೋತ್ರಿ ಬಡಾವಣೆಯಲ್ಲಿ ಸಾರ್ವಜನಿಕರ ಗ್ರಂಥಾಲಯವನ್ನು ನಿರ್ಮಿಸಲು ಸಾರ್ವಜನಿಕರಿಂದ 3 ಲಕ್ಷಗಳ ವಂತಿಕೆಯನ್ನು ಸಂಗ್ರಹಿಸಿ ಸಂದಾಯ ಮಾಡಿದ್ದು, ಸದರಿ ಗ್ರಂಥಾಲಯ ನಿರ್ಮಾಣಕ್ಕೆ ಅವಶ್ಯವಿರುವ ಭೂಮಿಯ ಲಭ್ಯತೆಯ ಬಗ್ಗೆ ವಿವರಗಳನ್ನು ಕೋರಿದರು.
- ಇದಕ್ಕೆ ಉತ್ತರವಾಗಿ ಅಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರು ಮಾತನಾಡಿ, ಈ ಬಗ್ಗೆ ಪರಿವೀಕ್ಷಣೆಯನ್ನು ಮಾಡಲಾಗಿದ್ದು, ಭೂಮಿಯನ್ನು ಗುರುತಿಸಲಾಗಿದ್ದು ಸಧ್ಯದಲ್ಲೇ ಎನ್.ಓ.ಸಿ ಯನ್ನು ನೀಡಲಾಗುವುದೆಂದು ತಿಳಿಸಿದರು.

ಈ ಸಂಬಂಧ ಪೂಜ್ಯ ಮಹಾಪೌರರು ಮಾತನಾಡಿ, ಬೂತ್ ಕಮಿಟಿ ಲೀಡರ್‌ಗೆ ಸಾರ್ವಜನಿಕರಿಂದ ಹಣವನ್ನು ಸಂಗ್ರಹಣೆ ಮಾಡಲು ಅವರು ತೋರಿಸಿರುವ ಆಸಕ್ತಿ ಹಾಗೂ ಮುತುವರ್ಜಿ ಬಗ್ಗೆ ವಂದನೆಗಳನ್ನು ಸಲ್ಲಿಸಿದರು. ಮತ್ತು ಪಾಲಿಕೆಗೆ ಸಂಬಂಧಿಸಿದಂತೆ ಯಾವುದಾದರೂ ತೊಂದರೆ ಇದ್ದಲ್ಲಿ, ಸಹಾಯ ಮಾಡಲು ಸಿದ್ದವಿರುವುದಾಗಿ ತಿಳಿಸಿದರು.

ದಿನಾಂಕ: 14.09.2009 ರಂದು ಅಶೋಕ ವೃತ್ತದಲ್ಲಿ ಪೈಪ್ ಲೈನ್ ಕುಸಿದಿರುವ ಬಗ್ಗೆ ಟಿ.ವಿ, ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ಬಂದ ವರದಿಗಳ ವಿಚಾರ ಪ್ರಸ್ತಾಪವಾಯಿತು.

- ಕಾರ್ಯಪಾಲಕ ಅಭಿಯಂತರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯವರು ಮಾತನಾಡಿ, ಸದರಿ ಕೊಳವೆ ಮಾರ್ಗವನ್ನು ಇತ್ತೀಚೆಗೆ ಅಳವಡಿಸಿದ್ದು, ದಸರಾ ಮಹೋತ್ಸವದ ಅಂಗವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳವರ ಸೂಚನೆ ಹಿನ್ನಲೆಯಲ್ಲಿ ದಸರಾ ಹಬ್ಬದ ಮೇರೆಗೆ, ಸಾರ್ವಜನಿಕರ ಅನುಕೂಲಕ್ಕಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದ್ದು, ಸದರಿ ಕೊಳವೆ ಮಾರ್ಗವನ್ನು ಇನ್ನು ಜಲ ಒತ್ತಡ ಪರೀಕ್ಷೆಗೆ ಒಳಪಡಿಸಬೇಕಾಗಿದೆ ಎಂದು ತಿಳಿಸಿದರು. ಆ ಕೊಳವೆ ಮಾರ್ಗವನ್ನು ಸುಮಾರು 3 ಮೀ ಆಳದಲ್ಲಿ ಅಳವಡಿಸಲಾಗಿದ್ದು, ಈ ಕೊಳವೆ ಮೇಲ್ಭಾಗದಲ್ಲಿ ಕೆ.ಜಿ.ಕೊಪ್ಪಲ್ ರಸ್ತೆ ಕಡೆಯಿಂದ ಬರುವ ಮಳೆ ನೀರು ಹಾದು ಹೋಗಲು ಹಳೆಯದಾದ ಅಡ್ಡ ಚರಂಡಿ ಇದೆ. ಕೊಳವೆ ಮಾರ್ಗದ ತುದಿಯನ್ನು ಮರಳು ಚೀಲದಿಂದ ತಾತ್ಕಾಲಿಕವಾಗಿ ಮುಚ್ಚಿದ್ದು, ದಿನಾಂಕ:13.09.2009ರ ರಾತ್ರಿ ಅತಿ ಹೆಚ್ಚು ಮಳೆಯಾಗಿ ಚರಂಡಿಯ ತಳಭಾಗದಲ್ಲಿ ನೀರಿನ ಸೋರುವಿಕೆಯು ಉಂಟಾಗಿ, ಆ ನೀರು ಮರಳು ಚೀಲವನ್ನು

ತಳ್ಳಿ ಕೊಳವೆ ಮಾರ್ಗದ ಒಳಕ್ಕೆ ನುಗ್ಗಿದ್ದರಿಂದ ಪೈಪಿಂಗ್ ಆಕ್ಶನ್ ಆಗಿ ಕೊಳವೆ ಮಾರ್ಗದ ಮಣ್ಣನ್ನು ಸುಮಾರು 30 ಮೀ ಉದ್ದದವರೆಗೆ ಸೆಳೆದು ಆ ಕೊಳವೆ ಒಳಗೆ ಹೋಗಿರುತ್ತದೆ. ಈ ಬಗ್ಗೆ ಸದರಿ ಸ್ಥಳದಲ್ಲಿ ಅಡ್ಡ ಚರಂಡಿಯ ತಳಭಾಗವನ್ನು ತೆರವುಗೊಳಿಸಿ ಪರಿಶೀಲಿಸಿದಾಗ ಕಂಡು ಬಂದಿರುತ್ತದೆ. ಇದು ಹಿಂದಿನ ದಿನದ ರಾತ್ರಿ ಭಾರಿ ಮಳೆಯಾದ್ದರಿಂದ ಈ ರೀತಿ ಉಂಟಾಗಿರುತ್ತದೆ. ಆ ರಸ್ತೆಯಲ್ಲಿ ಸುಮಾರು 400 ಮೀ ಉದ್ದಕ್ಕೆ ಕೊಳವೆ ಮಾರ್ಗವನ್ನು ಅಳವಡಿಸಲಾಗಿದೆ. ಕೇವಲ 30 ಮೀ ಮಾತ್ರ ತೆರೆದ ಚರಂಡಿಯಿಂದ ನೀರು ನುಗಿದ್ದರಿಂದ ಕೊರೆತ ಉಂಟಾಗಿದ್ದು, ಉಳಿದ ಭಾಗದಲ್ಲಿ ಯಾವುದೇ ತಗ್ಗುಗಳು ಇರುವುದಿಲ್ಲ. ಆದುದರಿಂದ ಕಾಮಗಾರಿ ನಿರ್ವಹಣೆಯಲ್ಲಿ ಯಾವುದೇ ರೀತಿಯ ಲೋಪವು ಆಗಿರುವುದಿಲ್ಲ ಹಾಗೂ ಇದು ನೈಸರ್ಗಿಕ ವಿಕೋಪದಿಂದ ಉಂಟಾಗಿರುತ್ತದೆ ಎಂದು ಸಭೆಗೆ ವಿವರಿಸಿದರು.

- ಈ ವಿಚಾರದಲ್ಲಿ ಎ.ಸಿ.ಐ.ಸಿ.ಎಂ ಸಂಚಾಲಕರಾದ ಲಕ್ಷ್ಮಣ್‌ರವರು ಮಾತನಾಡಿ, ಇತರ ಇಂಜಿನಿಯರ್‌ಗಳ ಜೊತೆ ಸದರಿ ಸ್ಥಳವನ್ನು ಪರಿಶೀಲಿಸಿದ್ದು, ಇದು ಅತಿ ಹೆಚ್ಚಿನ ಮಳೆಯಾದ್ದರಿಂದಲೂ ಸದರಿ ಕೊಳವೆ ಮಾರ್ಗವನ್ನು ತಾತ್ಕಾಲಿಕವಾಗಿ ಮುಚ್ಚಿದ್ದರಿಂದ ನೀರಿನ ಹರಿವಿನೊಡನೆ ಕೊಳವೆ ಮಾರ್ಗದ ಮಣ್ಣು ಕೊಚ್ಚಿ ಹೋಗಿ ಕೊಳವೆ ಮಾರ್ಗದೊಳಕ್ಕೆ ನುಗ್ಗಿದ್ದು, ಇದಕ್ಕೆ ಕಾಮಗಾರಿಗೆ ಸಂಬಂಧಿಸಿದ ಇಂಜಿನಿಯರ್‌ಗಳ ಲೋಪವಾಗಲಿ ಅಥವಾ ಗುತ್ತಿಗೆದಾರರ ಲೋಪವಾಗಲಿ ಇರುವುದಿಲ್ಲವೆಂದು ಸ್ಪಷ್ಟಪಡಿಸಿ ಈ ಬಗ್ಗೆ ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳಿಗೆ ಲಿಖಿತವಾಗಿ ಪತ್ರ ಸಲ್ಲಿಸಿರುವುದಾಗಿ ತಿಳಿಸಿದರು. ಮುಂದುವರೆದು, ಈ ವಿಚಾರವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು ಈ ಕಾಮಗಾರಿಗೆ ಸಂಬಂಧಿಸಿದ ಇಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರ ಮೇಲೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದಾರೆಂದು ತಿಳಿದು ಬಂದಿದ್ದು, ಇದು ಸಮಂಜಸವಾಗಿರುವುದಿಲ್ಲ. ಈ ರೀತಿಯಾದಲ್ಲಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ನೈತಿಕ ಸ್ಥೈರ್ಯಗೆಡುವಂತಾಗಿ ಕಾಮಗಾರಿ ಪ್ರಗತಿ ಕುಂಠಿತಗೊಳ್ಳುವ ಸಂಭವವಿರುತ್ತದೆ. ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸಭೆಯಲ್ಲಿ ಹಾಜರಿದ್ದ ಬಹು ಜನರು ಈ ಬಗ್ಗೆ ಸಹಮತ ವ್ಯಕ್ತಪಡಿಸಿದರು.
- ಸಭೆಯಲ್ಲಿದ್ದ ಸದಸ್ಯರಾದ ಮಾನ್ಯಶ್ರೀ ಸಂದೇಶ ಸ್ವಾಮಿರವರು ಮಾತನಾಡಿ ಈ ಬಗ್ಗೆ ಪತ್ರಿಕಾ ಮಾಧ್ಯಮದವರಿಗೆ ಏಕೆ ಸತ್ಯ ಸಂಗತಿಯನ್ನು ವಿವರಿಸಿಲ್ಲ. ಇದರಿಂದಾಗಿ ಜನತೆಗೆ ನರ್ಮ್ ಕಾಮಗಾರಿಯ ಬಗ್ಗೆ ಅನಾವಶ್ಯಕವಾಗಿ ತಪ್ಪು ಸಂದೇಶ ರವಾನೆಯಾಗಿದೆ. ಆದುದರಿಂದ ಈ ಬಗ್ಗೆ ಪತ್ರಿಕಾ ಮರು ಪ್ರಕಟಣೆ ನೀಡಿ ಜನತೆಗೆ ಸತ್ಯಾಂಶ ತಿಳಿಸುವಂತೆ ಸಲಹೆ ಸೂಚಿಸಿದರು.

- ನಂತರ ಸದಸ್ಯರಾದ ಮಾನ್ಯಶ್ರೀ ನಾಗೇಂದ್ರರವರು ಮಾತನಾಡಿ ಮಳೆಗಾಲವಾದ್ದರಿಂದ ಸದ್ಯಕ್ಕೆ ಡಬ್ಲ್ಯೂಬಿ.ಎಂ ಮಾತ್ರ ಮಾಡಿ, ಮಳೆಗಾಲ ನಿಂತ ನಂತರ ಡಾಂಬರೀಕರಣ ಮಾಡುವಂತೆ ತಿಳಿಸಿದರು. ಮಾಧ್ಯಮಗಳಲ್ಲಿ ವರದಿಯಾಗಿರುವ ನರ್ಮ್ ಕಾಮಗಾರಿ ಗುಣಮಟ್ಟ ಬಹಿರಂಗ ಎಂಬ ತಲೆಬರಹದಡಿ ವರದಿಯಾಗಿರುವಂತೆ ಕಾಮಗಾರಿ ಕಳಪೆ ಮಟ್ಟದ್ದಾಗಿಲ್ಲ ಮತ್ತು ಅದು ಸತ್ಯಕ್ಕೆ ದೂರವಾದ ಸಂಗತಿ ಎಂದು ಸಭೆಯು ಅಭಿಪ್ರಾಯ ವ್ಯಕ್ತಪಡಿಸಿತು ಮತ್ತು ಪತ್ರಿಕೆಗಳಲ್ಲಿ ಬಂದಿರುವ ವರದಿಗಳಿಂದ ಸಾರ್ವಜನಿಕರಲ್ಲಿ ಉಂಟಾಗಿರುವ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲು ಪತ್ರಿಕೆಗಳಲ್ಲಿ ನರ್ಮ್ ಕಾಮಗಾರಿಯಲ್ಲಿ ಯಾವುದೇ ಕಳಪೆಯಾಗಿಲ್ಲದಿರುವ ಬಗ್ಗೆ ಪ್ರತ್ಯುತ್ತರ ನೀಡಲು ಅಧೀಕ್ಷಕ ಅಭಿಯಂತರವರಿಗೆ ತಿಳಿಸಿದರು.
- ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಮಹಾಪೌರರು ಸಹ ಹಿಂದಿನ ದಿನದ ರಾತ್ರಿ ಅತಿ ಹೆಚ್ಚು ಮಳೆಯಾಗಿದ್ದು, ತೆರೆದ ಚರಂಡಿಯ ನೀರು ತಳಭಾಗದಲ್ಲಿ ಕೊಳವೆ ಮಾರ್ಗದ ಕಂದಕಕ್ಕೆ ವಿಪರೀತವಾಗಿ ನುಗಿದ್ದರಿಂದ ಮಣ್ಣಿನ ಕೊರೆತ ಉಂಟಾಗಿರಬಹುದೆಂದು ಒಪ್ಪಿದರು. ದಸರಾ ಮುಗಿದ ನಂತರ ಸದರಿ ಕೊಳವೆ ಮಾರ್ಗವನ್ನು ಜಲ ಒತ್ತಡ ಪರೀಕ್ಷೆಗೆ ಒಳಪಡಿಸಿ, ಕಂದಕವನ್ನು ಭದ್ರಪಡಿಸಿ ರಸ್ತೆಯನ್ನು ಮೂಲ ಸ್ಥಿತಿಗೆ ತರಲು ಸೂಚಿಸಿದರು. ಇನ್ನು ಮುಂದೆ ಕಾಮಗಾರಿಯನ್ನು ನಿರ್ವಹಿಸುವಾಗ ತೀವ್ರ ನಿಗಾವಹಿಸುವಂತೆ ಹಾಗೂ ಜಾಗೃತರಾಗಿರಬೇಕೆಂದು ಹೇಳಿದರು.

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಆಯುಕ್ತರು
ಮೈಸೂರು ನಗರಾಭಿವೃದ್ದಿ ಪ್ರಾಧಿಕಾರ
ಮೈಸೂರು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ:

1. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರುವಂತೆ ಕೋರಿದೆ.
2. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
3. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
5. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
6. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
7. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
8. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
9. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
11. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
12. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ,ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
14. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
15. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
16. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,ಬೆಂಗಳೂರು – 1.

II ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪುರಂ, ಬೆಂಗಳೂರು.
4. ಉಪ ವಿಭಾಗಾಧಿಕಾರಿಗಳು, ಮೈಸೂರು.
5. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
6. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
7. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯೂ,ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
9. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
10. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
11. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.

ಆಯುಕ್ತರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು.